# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 776 / 2021

ಸಿಡಬ್ಲ್ಯೂ- 13
ಪಿಡಬ್ಲ್ಯೂ- 11

ದಿನಾಂಕಃ **19.07.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರುಃ - ಡಾಃ ಶಿವಕುಮಾರ
ತಂದೆಯ/ಗಂಡನ ಹೆಸರುಃ - ಚನ್ನಪ್ಪ
ವಯಸ್ಸುಃ -? **33** ವರ್ಷ
ಉದ್ಯೋಗಃ - ವೈದ್ಯಾಧಿಕಾರಿಗಳು.
ವಾಸಸ್ಥಳಃ - ಕಲಬುರಗಿ.

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

11 ತಿಂಗಳ ವರೇಗೆ 2020-21 ಸಾಲಿನಲ್ಲಿ ಯಾದಗಿರಿ ಸರಕಾರಿ ಆಸ್ಪತ್ರೆಯಲ್ಲಿ ನಾನು ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ22.02.2021 ರಂದು ಮದ್ಯಾಹ್ಣ 1.15 ಗಂಟೆಗೆ ಚಾಸಾ-1 ರವರನ್ನು ಪರೀಕ್ಷಿಸಿರುತ್ತೇನೆ ಅವರ ಬಲಹೊಟ್ಟೆಯ ಭಾಗದಲ್ಲಿ 2X2 ಸೆಂಟಿ ಮೀಟರ್ ನಷ್ಟು ಸೀಳಿದ ಗಾಯಗಳಾಗಿತ್ತು. ಅದೇ ರೀತಿ ಅವರ ಬಲತೊಳಿನ ಕುತ್ತಿಗೆಯ ಹತ್ತಿರ ಇರುವ ಎಲುಬು ಮುರಿದಿತ್ತು. ನನ್ನ ಅಭಿಪ್ರಾಯದ ಪ್ರಕಾರ ಚಾಸಾ-1 ರವರಿಗೆ ಆದ ಗಾಯಗಳು ತೀವ್ರ ಸ್ವರೂಪ ಇರುತ್ತದೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ 7 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 7 (ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಚಾಸಾ-6 ರವರನ್ನು ಮದ್ಯಾಹ್ಣ 1-15 ಗಂಟೆಗೆ ಪರೀಕ್ಷಿಸಿರುತ್ತೇನೆ. ಅವರ ಬಲಭುಜದ ಮೇಲೆ 1x2 ಸೆ.ಮೀಟರ್ ತರಚಿತ ಗಾಯ ಆಗಿತ್ತು. ನನ್ನ ಅಭಿಪ್ರಾಯದ ಪ್ರಕಾರ ಚಾಸಾ-6 ರವರಿಗೆ ಆದ ಗಾಯಗಳು ಸಾದಾ ಸ್ವರೂಪ ಇರುತ್ತದೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ 8 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 8 (ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಚಾಸಾ-7 ರವರನ್ನು ಮದ್ಯಾಹ್ಣ 1-15 ಗಂಟೆಗೆ ಪರೀಕ್ಷಿಸಿರುತ್ತೇನೆ ಅವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಈ

ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ 9 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 9 (ಎ) ಎಂದು ಗುರುತಿಸಲಾಯಿತು. ರಸ್ತೆ ಅಪಘಾತದಿಂದ ಚಾಸಾ-1 ಮತ್ತು 6 ರವರಿಗೆ ಈ ಮೇಲೆ ಹೇಳಿದ ಗಾಯಗಳು ಅವರಿಗೆ ಆಗಿರುತ್ತವೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಎಸ್.ಪಿ. ರವರಿಂದಃ

ನಾನು ಸ್ನಾತಕೋತರ ಪದವಿ ಮುಗಿಸಿದ ಪ್ರಶಿಕ್ಷಣ ಪಡಿಯುತ್ತಿದ್ದಾಗ ನಾನು ಚಾಸಾ-1,6 ಮತ್ತು 7 ರವರನ್ನು ಪರೀಕ್ಷಿಸಿರುತ್ತೇನೆ. ಸಮಾನ್ಯವಾಗಿ ಒಬ್ಬ ರೋಗಿಯು ಆಸ್ಪತ್ರೆಗೆ ಚಿಕಿತ್ಸೆಯನ್ನು ಪಡೆಯಲು ಬಂದಾಗ ಅವರನ್ನು ಪರೀಕ್ಷಿಸಲು ಸುಮಾರು 5 ನಿಮಿಷ್ಯ ಸಮಯ ತೆಗೆದುಕೊಳುತ್ತೀರಿ ಎಂದರೆ ಸಾಕ್ಷಿಯು ತೀವ್ರ ಸ್ವರೂಪದ ರೋಗಗಳಿಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತೇವೆ ಸಣ್ಣಪುಟ್ಟ ಗಾಯಗಳಾದ ರೋಗಿಗಳಿಗೆ ಕೇವಲ 2-3 ನಿಮಿಷ್ಯದಲ್ಲಿ ಪರೀಕ್ಷೆ ಮಾಡುತ್ತೇನೆ. ಚಾಸಾ-1 ರವರನ್ನು ಪರೀಕ್ಷೆ ಮಾಡಲು ನಾನು 5 ನಿಮಿಷ್ಯ ಸಮಯವನ್ನು ತೆಗೆದುಕೊಂಡಿರುವುದಿಲ್ಲ. ನಿಪಿ 7 ರಿಂದ 9 ರಲ್ಲಿ ಚಾಸಾ-1,6 ಮತ್ತು 7 ರವರನ್ನು ಮದ್ಯಾಹ್ನ 1-15 ಗಂಟೆಗೆ ಪರೀಕ್ಷಿಸಿರುತ್ತೇನೆ ಎಂದು ಅದರಲ್ಲಿ ಬರೆದದ್ದು ಇರುತ್ತದೆ ಎಂದರೆ ಸರಿ. ನಾನು ಚರ್ಮ ರೋಗ ತಜ್ಞ ಇದ್ದೆ. ನಾನು ಕೀಳು ಮತ್ತು ಮೂಳೆ ತಜ್ಞನಾಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಎಂ ಬಿ ಬಿ ಎಸ್ ಪದವಿಯನ್ನು ಪಡೆದಿರುವ ಕಾರಣ ನನಗೂ ಸಹ ಅನುಭವ ಇರುತ್ತದೆ ಎಂದು ಹೇಳುತ್ತಾರೆ. ಚಾಸಾ-1 ರವರಿಗೆ ಆದ ಗಾಯದಿಂದ ರಕ್ತ ಬರುತ್ತಿತ್ತು. 5-10 ನಿಮಿಷ್ಯಗಳಲ್ಲಿ ಚಾಸಾ-1 ರವರಿಗೆ ಆದ ಗಾಯದಿಂದ ಬರುತ್ತಿತ್ತ ರಕ್ತವು ಗಟ್ಟಿ ಆಗಬಹುದು ಸಾಕ್ಷಿಯು ಮುಂದುವರೆದು ಸದರಿ ಗಾಯದ ಭಾಗದಲ್ಲಿ ಏನಾದರೂ ಹತ್ತಿದ್ದರೆ ಅದರಿಂದ ಮತ್ತೈ ರಕ್ತ ಬರುವ ಸಾಧ್ಯತೆ ಇರುತ್ತದೆ ಎಂದು ಹೇಳುತ್ತಾರೆ. ದಿನಾಂಕಃ 22.02.2021 ಮದ್ಯಾಹ್ನ 1-15 ಗಂಟೆಗೆ ಚಾಸಾ-1,6 ಮತ್ತು 7 ರವರನ್ನು ನಾನು ಪರೀಕ್ಷಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ನಿಪಿ 7 ರಿಂದ 9 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯು ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದಾರೆ ಸದರಿ ವ್ಯಕ್ತಿಗಳಿಗೆ ನಿಪಿ 7 ಮತ್ತು 8 ರಲ್ಲಿ ತೋರಿಸಿದಂತ ಗಾಯಗಳು ಆಗುತ್ತವೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.